## **‘ಪರಿಸರ ಗೀತೆಗಳ ಸ್ಪರ್ಧೆ’** ಹಾಗೂ
## **ಬಹುಮಾನ ವಿತರಣೆ ಸಮಾರಂಭ**




ಧಾರವಾಡ : ಜಲವೇ ನಮ್ಮ ಜೀವನ. ಅದು ಸಮಸ್ತ ಜೀವಿಗಳ ಮೂಲ ಜೀವಾಳ. ನೀರು ದುರ್ಬಳಕೆಯಾಗದೆ ಸದ್ಬಳಕೆಯಾಗಬೇಕೆಂದು ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರಾದ ಆರ್. ಎಸ್. ಚಿನ್ನಣ್ಣನವರ ಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಕಲಾ ಮಂಟಪವು, ದಿನಾಂಕ **೧೨-೬-೨೦೧೯** ರಂದು ವಿಶ್ವಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ **‘ಪರಿಸರ ಗೀತೆಗಳ ಸ್ಪರ್ಧೆ’**ಯ ಬಹುಮಾನ ವಿತರಣಾ ಸಮಾರಂಭದ ಅತಿಥಿಯಾಗಿ ಅವರು ಮಾತನಾಡಿ, ನೀರಿಲ್ಲದೆ ಭೂಮಿಯ ಮೇಲೆ ಯಾವ ಜೀವರಾಶಿಗಳೂ ಬದುಕಲು ಸಾಧ್ಯವಿಲ್ಲ. ಗೃಹ ಬಳಕೆಯಲ್ಲಿ ನೀರನ್ನು ಹಿತಮಿತವಾಗಿ, ಮಿತವ್ಯಯದಿಂದ ಬಳಸಬೇಕು. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ನಮ್ಮ ಜೀವನ ಶೈಲಿ ಬದಲಾಗಿದ್ದು, ಅದು ಎಂದಿಗೂ ನಮ್ಮ ಸಾಮಾಜಿಕ ಪರಿಸರಕ್ಕೆ ಅಡ್ಡಿಯಾಗಬಾರದು. ಮುಂದಿನ ನಮ್ಮ ಪೀಳಿಗೆ ಜೀವಜಲಕ್ಕಾಗಿ ಪರಿತಪಿಸಬಾರದು ಎಂದರು.

ಪರಿಸರ ಸಂರಕ್ಷಣಾ ಕಾರ್ಯವು ಮೊದಲು ನಮ್ಮ ಮನೆಯಿಂದಲೇ ಪ್ರಾರಂಭವಾಗಬೇಕು. ನಮ್ಮ ಮಕ್ಕಳಿಗೆ ನೀರಿನ ಸದ್ಬಳಕೆಯ ಬಗ್ಗೆ ಅಗತ್ಯ ಮಾಹಿತಿಯನ್ನು ನೀಡಬೇಕು. ಜನಸಮುದಾಯದಲ್ಲಿಯೂ ಜಲಸಾಕ್ಷರತೆಯ ಬಗ್ಗೆ ಅರಿವು ಮೂಡಿಸುವ ಶಿಬಿರಗಳನ್ನು, ಚರ್ಚೆ ಮತ್ತು ಸಂವಾದಗಳನ್ನು ಇತ್ಯಾದಿಗಳನ್ನು ಏರ್ಪಡಿಸುವುದು ಸೂಕ್ತ. ‘ಪರಿಸರ ಸಂರಕ್ಷಣೆ ಜೀವಕ್ಕೆ ರಕ್ಷಣೆ’ ಪರಿಸರವನ್ನು ನಾವು ರಕ್ಷಿಸಿದರೆ ಪರಿಸರವು ನಮ್ಮನ್ನು ರಕ್ಷಿಸುತ್ತದೆ ಎಂಬ ಮೂಲಮಂತ್ರವನ್ನು ಪ್ರಜ್ಞಾಪೂರ್ವಕವಾಗಿ ಅರಿತುಕೊಳ್ಳಬೇಕು. ಇಂದು ಶಾಲಾ ಮಕ್ಕಳು ಶಾಲೆಗೆ ನೀರಿನ ಬಾಟಲ್ ಒಯ್ಯುವಂತೆ ಭವಿಷ್ಯದಲ್ಲಿ ಆಕ್ಷಿಜನ್ ಬಾಟಲ್ ಒಯ್ಯುವ ದಿನಮಾನಗಳು ದೂರವಿಲ್ಲ. ಪರಿಸರದ ಸಂರಕ್ಷಣೆಗೆ ಎಲ್ಲರೂ ಕೈಜೋಡಿಸಿದಲ್ಲಿ ಭವಿಷ್ಯದಲ್ಲಿ ಈ ಭೂಮಿಯನ್ನೇ ಸ್ವರ್ಗವನ್ನಾಗಿಸಬಹುದು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ ಜಿಲ್ಲಾ ಪರಿಸರ ಅಧಿಕಾರಿ ವಿಜಯಕುಮಾರ ಕಡಕ್‌ಭಾವಿ ಮಾತನಾಡಿ, ವಿಶ್ವದಲ್ಲಿ ಶೇ ೯೨% ರಷ್ಟು ಜನರಿಗೆ ಶುದ್ಧವಾದ ಗಾಳಿ ಇಲ್ಲದೇ ಪ್ರತಿವರ್ಷ ಕಲುಷಿತ ಗಾಳಿ ಸೇವನೆಯಿಂದ ೭೫ ಲಕ್ಷಕ್ಕಿಂತ ಹೆಚ್ಚು ಜನರು ಸಾವನ್ನಪ್ಪುತ್ತಿರುವುದು ಈ ಶತಮಾನದ ದೊಡ್ಡ ದುರಂತ. ವಿಶ್ವ ಸಮುದಾಯಕ್ಕೆ ಇದು ಆತಂಕಕಾರಿಯೂ ಹೌದು. ಆಮ್ಲ ಮಳೆ, ಓಝೋನ ಪದರು ನಾಶ ಮತ್ತು ಭೂತಾಪಮಾನಗಳು ವಾಯುಮಾಲಿನ್ಯದ ಕರಾಳ ಘಟನೆಗಳಾಗಿವೆ. ಜಾಗತೀಕ ತಾಪಮಾನದಿಂದ ಭೂಮಿಯ ಮೇಲಿನ ಉಷ್ಣತೆ ದಿನೇ ದಿನೇ ಹೆಚ್ಚಾಗಿ ಹಿಮಪ್ರದೇಶಗಳು ಕರಗಿ ನೀರಾಗಿ ಹರಿದು ಸಮುದ್ರ ಸೇರಿ, ಸಮುದ್ರದ ನೀರಿನ ಮಟ್ಟವು ಹೆಚ್ಚಾಗಿ ತೀರಪ್ರದೇಶದ ನಗರಗಳು ಮತ್ತು ದ್ವೀಪ ಪ್ರದೇಶಗಳು ನೀರಿನಲ್ಲಿ ಮುಳುಗುವ ಆತಂಕ ಇದೆ ಎಂದು ಕಳವಳ ವ್ಯಕ್ತಪಡಿಸಿದರು. “ನಮಗಿಂದು ಬೇಕಾಗಿರುವುದು ಸುಧಾರಿತ ಅರ್ಥಿಕ ವ್ಯವಸ್ಥೆಯಲ್ಲ ಬದಲಾಗಿ ಹಸಿರು ಆರ್ಥಿಕ ವ್ಯವಸ್ಥೆ” ಎಂಬ ವಿಶ್ವಸಂಸ್ಥೆಯ ಹೇಳಿಕೆ ಕಟುಸತ್ಯವಾಗಿದೆ.

ಸ್ಪರ್ಧೆಯಲ್ಲಿ ೨೫ ಕ್ಕೂ ಹೆಚ್ಚು ಸ್ಪರ್ಧಾಳುಗಳು ಭಾಗವಹಿಸಿದ್ದರು. ಅದರಲ್ಲಿ ಕು. ನಾಗರತ್ನಾ ಪುರಾಣಿಕಮಠ ಪ್ರಥಮ, ಕು. ಪ್ರಿಯದರ್ಶಿನಿ ಪಾಟೀಲ ದ್ವಿತೀಯ ಮತ್ತು ಕು. ಅನನ್ಯಾ ಪಾಮಡಿ ತೃತೀಯ ಹಾಗೂ ಕಲ್ಪತರು ಮಹಿಳಾ ಮಂಡಳದ ಲತಾ ಕುಂಬಾರ ಸಮಾಧಾನಕರ ಬಹುಮಾನ ಪಡೆದರು. ಭಾಗವಹಿಸಿದ ಎಲ್ಲ ಸ್ಪರ್ಧಾಳುಗಳಿಗೂ ಪ್ರಮಾಣ ಪತ್ರ ನೀಡಲಾಯಿತು.

ಶ್ರೀಮತಿ ರಾಧಾ ದೇಸಾಯಿ, ಕೆ. ಎಚ್. ನಾಯಕ, ಪ್ರಭು ಅಂಚಟಗೇರಿ ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದರು. ವೇದಿಕೆಯಲ್ಲಿ ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ (ಇಟಗಿ) ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಕಲಾ ಮಂಟಪದ ಸಂಚಾಲಕ ಶಂಕರ ಕುಂಬಿ ಅತಿಥಿಗಳಿಗೆ ಶಾಲು ಹೊದಿಸಿ ಗೌರವಿಸಿದರು. ಪ್ರೊ. ಕೆ. ಎಸ್.ಕೌಜಲಗಿ ನಿರೂಪಿಸಿದರು. ಎಸ್. ಸಿ. ನೀರಾವರಿ ವಂದಿಸಿದರು.

ಕಾರ್ಯಕ್ರಮದಲ್ಲಿ ಶಾಂತೇಶ ಗಾಮನಗಟ್ಟಿ, ಇಸಬೆಲ್ಲಾ ಝೇವಿಯರ್, ವೀರಣ್ಣ ಒಡ್ಡೀನ, ಪ್ರಭು ಹಂಚಿನಾಳ, ಮೇಘಾ ಹುಕ್ಕೇರಿ, ದೀಪಕ ಆಲೂರ, ಎಂ. ಎಸ್. ನರೇಗಲ್ಲ ಸೇರಿದಂತೆ ಅನೇಕರು ಭಾಗವಹಿಸಿದ್ದರು.

**ಶಂಕರ ಕುಂಬಿ**
ಕಾರ್ಯಕಾರಿ ಸಮಿತಿ ಸದಸ್ಯರು
ಮೇ ತಿಂಗಳ ದತ್ತಿ ಕಾರ್ಯಕ್ರಮಗಳ ಸಂಯೋಜಕರು
ಮೊ: ೯೪೪೮೮-೦೧೧೪೧